ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 10-02-2017

## ಪತ್ರಿಕಾ ಆಮಂತ್ರಣ

1. ಲೈಂಗಿಕ ಕಾರ್ಯಕರ್ತೆಯರ ಸ್ಥಿತಿಗತಿಗಳ ಅಧ್ಯಯನ ಸಮಿತಿ ವರದಿ ಸಲ್ಲಿಕೆ:
   ಡಾ: ಜಯಮಾಲ,
   ಸಮಿತಿ ಅಧ್ಯಕ್ಷರು.

   ದಿನಾಂಕ: 13-02-2017 ಸೋಮವಾರ, ಮಧ್ಯಾಹ್ನ 3.00 ಗಂಟೆಗೆ
   ಸ್ಥಳ: ಮುಖ್ಯಮಂತ್ರಿಯವರ ಕೊಠಡಿ, ಮೂರನೇ ಮಹಡಿ, ವಿಧಾನ ಸೌಧ, ಬೆಂಗಳೂರು

## ಪತ್ರಿಕಾ ಪ್ರಕಟಣೆ

## ವಿಧಾನ ಪರಿಷತ್ತಿನಲ್ಲಿ ಇಂದು

## ರಾಜ್ಯದಲ್ಲಿ 5562 ಗ್ರಾಮ ಪಂಚಾಯಿತಿಗಳಿಗೆ ಸ್ವಂತ ಕಟ್ಟಡ

ಬೆಂಗಳೂರು, ಫೆಬ್ರವರಿ 10, (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಹಾಲಿ ಇರುವ ಒಟ್ಟು 6022 ಗ್ರಾಮ ಪಂಚಾಯತಿಗಳ ಪೈಕಿ 5562 ಗ್ರಾಮ ಪಂಚಾಯಿತಿಗಳಿಗೆ ಸ್ವಂತ ಕಟ್ಟಡವಿದೆ. 460 ಗ್ರಾಮ ಪಂಚಾಯಿತಿಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವ ಹೆಚ್.ಕೆ. ಪಾಟೀಲ್ ಅವರು ತಿಳಿಸಿದರು.

ಇಂದು ವಿಧಾನ ಪರಿಷತ್ ಸದಸ್ಯ ಜಿ. ರಘು ಅವರ ಪ್ರಶ್ನೆಗೆ ಉತ್ತರಿಸುತ್ತಾ, ಸ್ವಂತ ಕಟ್ಟಡ ಹೊಂದಿಲ್ಲದ ಹೊಸದಾಗಿ ರಚನೆಯಾದ 460 ಗ್ರಾಮ ಪಂಚಾಯಿತಿಗಳಿಗೆ ತಲಾ 40 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದು ಸದನಕ್ಕೆ ತಿಳಿಸಿದರು.

ಈವರೆಗೂ 30 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ ಮತ್ತು ರಾಜೀವ್ ಗಾಂಧಿ ಸೇವಾ ಕೇಂದ್ರ ನಿರ್ಮಾಣಕ್ಕಾಗಿ ಪ್ರತಿ ಗ್ರಾಮ ಪಂಚಾಯಿತಿಗೆ 16.25 ಲಕ್ಷ ರೂ. ಲಭ್ಯವಿರುತ್ತದೆ ಎಂದರು.

ಎಸ್‌ಎಂ:ಜೆಡಿ:ಜಿಪಿಆರ್

## ಕನ್ನಡಿಗರಿಗೆ ಶೇಕಡಾ 70 ರಷ್ಟು ಉದ್ಯೋಗ

ಬೆಂಗಳೂರು, ಫೆಬ್ರವರಿ 10, (ಕರ್ನಾಟಕ ವಾರ್ತೆ)

ಕೈಗಾರಿಕಾ ನೀತಿ 2014–19 ರಡಿ ಕೈಗಾರಿಕಾ ಘಟಕಗಳು ರಿಯಾಯಿತಿ ಹಾಗೂ ಪ್ರೋತ್ಸಾಹಗಳನ್ನು ಪಡೆದಿದ್ದಲ್ಲಿ ಅಂತಹ ಘಟಕಕ್ಕೆ ಕನ್ನಡಿಗರಿಗೆ ಒಟ್ಟಾರೆಯಾಗಿ ಶೇಕಡಾ 70 ರಷ್ಟು ಉದ್ಯೋಗ ಒದಗಿಸಬೇಕಾಗಿದೆ. ಅಲ್ಲದೆ, ಶೇಕಡಾ 100 ರಷ್ಟು ಗ್ರೂಪ್ – ಡಿ ನೌಕರರನ್ನು ನೇಮಿಸಿಕೊಳ್ಳಬೇಕಾಗಿರುತ್ತದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಆರ್. ವಿ. ದೇಶಪಾಂಡೆ ತಿಳಿಸಿದರು.

ಇಂದು ವಿಧಾನ ಪರಿಷತ್ತಿನ ಸದಸ್ಯ ರಿಜ್ವಾನ್ ಅರ್ಷದ್ ಅವರ ಪ್ರಶ್ನೆಗೆ ಉತ್ತರಿಸುತ್ತಾ ಕಳೆದ ಮೂರು ವರ್ಷಗಳಲ್ಲಿ ಕೆ.ಐ.ಎ.ಡಿ.ಬಿ.ಯು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಗಾಗಿ ಮತ್ತು ಏಕ ಘಟಕ ಸಂಕೀರ್ಣ ಯೋಜನೆಗಳಿಗಾಗಿ ಒಟ್ಟು 13750.29 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಸದನಕ್ಕೆ ತಿಳಿಸಿದರು.

ಎಸ್‌ಎಂ:ಜೆಡಿ:ಜಿಪಿಆರ್

## ರಾಜೀವ್ ವಸತಿ ಯೋಜನೆಯಡಿ 8,96,778 ಮನೆಗಳ ಮಂಜೂರು

ಬೆಂಗಳೂರು, ಫೆಬ್ರವರಿ 10, (ಕರ್ನಾಟಕ ವಾರ್ತೆ)

ಕಳದ 3 ವರ್ಷಗಳಲ್ಲಿ ರಾಜ್ಯದ ಎಲ್ಲಾ ಕ್ಷೇತ್ರಗಳಿಗೆ ರಾಜೀವ್ ವಸತಿ ಯೋಜನೆ ಅಡಿ 8,96,778 ಮನೆಗಳನ್ನು ಮಂಜೂರು ಮಾಡಲಾಗಿದೆ ಎಂದು ವಸತಿ ಸಚಿವ ಎಂ. ಕೃಷ್ಣಪ್ಪ ಅವರು ತಿಳಿಸಿದರು.

ಇಂದು ವಿಧಾನ ಪರಿಷತ್ ಸದಸ್ಯ ಎಂ.ಡಿ. ಲಕ್ಷ್ಮೀನಾರಾಯಣ ಪ್ರಶ್ನೆಗೆ ಸದನದಲ್ಲಿ ಉತ್ತರಿಸುತ್ತಾ ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು, ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರಿಕರಾಗಿದ್ದಲ್ಲಿ ಪುರುಷರು ಸಹ ಅರ್ಹರಾಗಿರುತ್ತಾರೆ ಎಂದರು.

ಕಳೆದ 3 ವರ್ಷಗಳಲ್ಲಿ ಬಸವ ವಸತಿ ಯೋಜನೆಯಡಿ 53,800 ಮತ್ತು ವಾಜಪೇಯಿ ನಗರ ವಸತಿ ಯೋಜನೆಯಡಿ 9,275 ಒಟ್ಟು 63,075 ಮನೆಗಳನ್ನು ಮಂಜೂರು ಮಾಡಲಾಗಿದೆ ಎಂದು ಸದನಕ್ಕೆ ತಿಳಿಸಿದರು.

ಎಸ್‌ಎಂ:ಜೆಡಿ:ಜಿಪಿಆರ್

## ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ

ಬೆಂಗಳೂರು, ಫೆಬ್ರವರಿ 10, (ಕರ್ನಾಟಕ ವಾರ್ತೆ)

ವಿವಿಧ ವಿಷಯ ಸಮೂಹಗಳ ಕಲೆ, ವಾಣಿಜ್ಯ, ವಿಜ್ಞಾನ, ಕಾನೂನು, ಶಿಕ್ಷಣ, ವ್ಯವಸ್ಥಾಪನೆ, ಹೋಟೆಲ್ ಮ್ಯಾನೇಜ್‌ಮೆಂಟ್ ಸ್ನಾತ್ತಕ/ಸ್ನಾತ್ತಕೋತ್ತರ ವ್ಯಾಸಂಗ ವಿಭಾಗಗಳಲ್ಲಿ ಹಾಗೂ ಇಂಜಿನಿಯರಿಂಗ್, ವಾಸ್ತುಶಿಲ್ಪ ಮತ್ತು ವ್ಯವಸ್ಥಾಪನೆ ಮುಂತಾದ ವೃತ್ತಿಪರ ಕ್ರಮಗಳ ಸಂಬಂಧದಲ್ಲಿ ಒಟ್ಟಾರೆಯಾಗಿ 203 ಚಿನ್ನದ ಪದಕಗಳನ್ನು ಹಾಗೂ ಪ್ರೋತ್ಸಾಹ ರೂಪದಲ್ಲಿ 74 ನಗದು ಬಹುಮಾನಗಳನ್ನು ದಾನಿಗಳು ನೀಡಿರುವ ಹಣದಿಂದ ಸ್ಥಾಪಿಸಲಾದ ನಿಧಿ/ದತ್ತಿಗಳಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನೀಡಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಅವರು ತಿಳಿಸಿದರು.

ಇಂದು ವಿಧಾನ ಪರಿಷತ್ ಸದಸ್ಯ ಕೆ.ಸಿ. ಕೊಂಡಯ್ಯ ಇವರ ಪ್ರಶ್ನೆಗೆ ಸದನದಲ್ಲಿ ಉತ್ತರಿಸುತ್ತಾ ಈ ನಿಧಿಗಳ/ದತ್ತಿಗಳ ಪೈಕಿ ಅನೇಕ ನಿಧಿ/ದತ್ತಿಗಳು ಮೂಲತ: 1962 ರಲ್ಲಿ ಸ್ಥಾಪಿತವಾಗಿ 1964 ರ ನಂತರದಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಂಡಿರುತ್ತವೆ. 1962 ರಿಂದ ಪ್ರಾರಂಭವಾದ ದಾನಿಗಳ ದತ್ತಿಯಿಂದಾಗಿ ಈವರೆಗೆ ರೂ 5.00 ಲಕ್ಷಗಳ ನಿಧಿ ಸಂಗ್ರಹವಾಗಿರುತ್ತದೆ ಎಂದರು.

ರೂ. 4000/- ಕ್ಕಿಂತ ಬಡ್ಡಿ ಬರುವ ದತ್ತಿಗಳ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ವಿತರಿಸಲಾಗುತ್ತಿದ್ದು, ಉಳಿದ ವಿದ್ಯಾರ್ಥಿಗಳಿಗೆ ದಾನಿಗಳು ದತ್ತಿ ಮಾಡಿರುವ ಹಣಕ್ಕೆ ಬರುವ ಕನಿಷ್ಠ ರೂ 500/- ಗಳಿಗೆ ಸಮನಾದ ವಿಶ್ವವಿದ್ಯಾಲಯದ ವಂತಿಗೆಯನ್ನು ಸೇರಿಸಿ ಪ್ರಮಾಣ ಪತ್ರದ ಜೊತೆ ಚೆಕ್ ಮೂಲಕ ಹಣವನ್ನು ನೀಡಲಾಗುತ್ತಿದೆ. ವಿಷಯವಾರು/ವ್ಯಾಸಂಗ ಕ್ರಮವಾರು ಪ್ರಥಮ ರ್‍ಯಾಂಕ್ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ 20ಗ್ರಾಂ ಬೆಳ್ಳಿ ನಾಣ್ಯಕ್ಕೆ

1.30 ಗ್ರಾಂ ಚಿನ್ನದ ಲೇಪನ ಮಾಡಿ ಪದಕಗಳನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರತಿ ಶೈಕ್ಷಣಿಕ ವರ್ಷದ ಘಟಿಕೋತ್ಸವದಲ್ಲಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ/ನಗದು ಬಹುಮಾನ ನೀಡುವ ಸಂಬಂಧದಲ್ಲಿ ನಿಧಿ ಸಂಗ್ರಹಿಸಲು ಬೆಂಗಳೂರು ವಿಶ್ವವಿದ್ಯಾಲಯದಿಂದ ಮಾನದಂಡಗಳನ್ನು ರಚಿಸಲಾಗಿದೆ. ಈ ಮಾನದಂಡಗಳ ಪ್ರಕಾರ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ನಿಗದಿಮಾಡುವ ಹಣವನ್ನು ನೀಡಿ ತಾವು ಪ್ರಸ್ತಾಪಿಸುವವರ ಹೆಸರಿನಲ್ಲಿ ನಿರ್ದಿಷ್ಟ ವಿಷಯ/ವ್ಯಾಸಂಗ ಕ್ರಮದ ಸಂಬಂಧದಲ್ಲಿ "ಚಿನ್ನದ ಪದಕ ಅಥವಾ ನಗದು ಬಹುಮಾನ" ಘೋಷಿಸುವ ಬಗ್ಗೆ ದಾನಿಗಳು ಲಿಖಿತ ರೂಪದಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾಗುತ್ತದೆ. ಈ ಅರ್ಜಿಗಳ ವಸ್ತು ವಿಷಯವನ್ನು ವಿಶ್ವವಿದ್ಯಾಲಯದ ಸಿಂಡಿಕೇಟ್ ಹಾಗೂ ಶೈಕ್ಷಣಿಕ ಪರಿಷತ್ ಪ್ರಾಧಿಕಾರಗಳ ಸಭೆಗಳಲ್ಲಿ ಅನುಮೋದಿಸಿ ಗೊತ್ತುವಳಿ ಅಂಗೀಕರಿಸಿದ ನಂತರದಲ್ಲಿ ದಾನಿಗಳು ಪ್ರಸ್ತಾಪಿಸಿರುವ ಹೆಸರಿನಲ್ಲಿ ನಿಧಿಗಳನ್ನು/ದತ್ತಿಗಳನ್ನು ಸ್ಥಾಪಿಸಲಾಗುತ್ತದೆ. ಈ ನಿಧಿಗಳಿಂದ/ದತ್ತಿಗಳಿಂದ ಪ್ರತಿಭಾವಂತ/ರ್ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಅಥವಾ ನಗದು ಬಹುಮಾನ ನೀಡಲಾಗುತ್ತದೆ ಎಂದರು.

ಎಸ್‌ಎಂ:ಜೆಡಿ:ಜಿಪಿಆರ್

## <u>ವಿಧಾನ ಸಭೆಯಲ್ಲಿ ಇಂದು:</u>

## <u>ಶೀಘ್ರವೇ ಮುಖ್ಯಾಧಿಕಾರಿಗಳ ಹುದ್ದೆ ಭರ್ತಿ</u>

ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಚುರುಕುಗೊಳಿಸಲು ಮುಖ್ಯಾಧಿಕಾರಿ ಶ್ರೇಣಿ –1 ಮತ್ತು ಮುಖ್ಯಾಧಿಕಾರಿ ಶ್ರೇಣಿ–2 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರಾದ ಈಶ್ವರ್ ಬಿ ಖಂಡ್ರೆ ವಿಧಾನ ಸಭೆಯಲ್ಲಿಂದು ತಿಳಿಸಿದರು.

ಶಾಸಕ ಡಾ: ಮಾಲಕರೆಡ್ಡಿ ಅವರ ಪ್ರಶ್ನೆಗೆ ಉತ್ತರಿಸುತ್ತಾ, ಮುಖ್ಯಾಧಿಕಾರಿ ಶ್ರೇಣಿ –1 ರ ಹುದ್ದೆಗಳನ್ನು ಮುಂಬಡ್ತಿ ಕೋಟಾದಡಿ ಶೇ. 66.66, ಶ್ರೇಣಿ –2 ಹುದ್ದೆಗಳನ್ನು ಶೇ. 66.66 ವ ಮುಂಬಡ್ತಿ ಮೂಲಕ ತುಂಬಲು ಅವಕಾಶವಿದ್ದು, ಆದರೆ ಮುಖ್ಯಾಧಿಕಾರಿ ವೃಂದದ ಅಧಿಕಾರಿಗಳ ಕೊರತೆ ಇರುವುದರಿಂದ ಆಡಳಿತಾತ್ಮಕ ಹಿತದೃಷ್ಟಿಯಿಂದ ಸಮುದಾಯ ಸಂಘಟನಾಧಿಕಾರಿಗಳನ್ನು ಹಾಗೂ ಇತರೆ ಇಲಾಖೆ ಅಧಿಕಾರಿಗಳನ್ನು ನಿಯೋಜನೆ ಮೇರೆಗೆ ತಾತ್ಕಾಲಿಕವಾಗಿ ಮುಖ್ಯಾಧಿಕಾರಿ ಹುದ್ದೆಗೆ ನೇಮಿಸಲಾಗಿದೆ ಎಂದು ವಿವರಿಸಿದರು.

ವಿಧೇಯಕ ಮಂಡನೆ:

ಪ್ರಾಣಿಗಳಿಗೆ ಹಿಂಸಾಚಾರ ಮಾಡುವುದನ್ನು ತಡೆಗಟ್ಟುವ (ಕರ್ನಾಟಕ ತಿದ್ದುಪಡಿ ಅಧಿನಿಯಮ 2017), ಕನಿಷ್ಠ ಮಜೂರಿಗಳ (ಕರ್ನಾಟಕ ತಿದ್ದುಪಡಿ ಅಧಿನಿಯಮ 2017) ಮತ್ತು ಕರ್ನಾಟಕ ಭೂ ಕಂದಾಯ(ತಿದ್ದುಪಡಿ) 2017 ನ್ನು ವಿಧಾನ ಸಭೆಯಲ್ಲಿಂದು ಮಂಡಿಸಲಾಯಿತು.

ಪಶುವೈದ್ಯಾಧಿಕಾರಿಗಳ ನೇಮಕ:

ರಾಜ್ಯದ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಇನ್ನೊಂದು ತಿಂಗಳಲ್ಲಿ ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲಾಗುವುದು ಎಂದು ಪಶುಸಂಗೋಪನಾ ಖಾತೆ ಸಚಿವ ಎ. ಮಂಜು ಅವರು ವಿಧಾನ ಸಭೆಯಲ್ಲಿಂದು ತಿಳಿಸಿದರು.

ಶಾಸಕ ಜಿ.ಟಿ. ದೇವೇಗೌಡ ಪ್ರಶ್ನೆಗೆ ಉತ್ತರಿಸುತ್ತಾ ಮಾತನಾಡಿದ ಸಚಿವರು 550 ಪಶುವೈದ್ಯಾಧಿಕಾರಿಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸಚಿವ ಸಂಪುಟ ತೀರ್ಮಾನ ತೆಗೆದುಕೊಂಡಿದ್ದು, ಅಂತೆಯೇ ಅಥಣಿ ಮತ್ತು ಗದಗದಲ್ಲಿ ಪಶುವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲಿದ್ದು 1521 ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಎಸ್‌ಎಂ/ಮಮತ

# ನಗರಕ್ಕೆ ಉಪರಾಷ್ಟ್ರಪತಿ ಆಗಮನ

ಬೆಂಗಳೂರು, ಫೆಬ್ರವರಿ 10 (ಕರ್ನಾಟಕ ವಾರ್ತೆ)

ಇಂದು ಸಂಜೆ ಬೆಂಗಳೂರು ಭೇಟಿಗಾಗಿ ಹೆಚ್.ಎ.ಎಲ್. ವಿಮಾನ ನಿಲ್ದಾಣಕ್ಕೆ ಭಾರತೀಯ ವಾಯುಸೇನಾ ವಿಮಾನದಲ್ಲಿ ಆಗಮಿಸಿದ ಘನತೆವೆತ್ತ ಉಪ ರಾಷ್ಟ್ರಪತಿ ಅಬ್ದುಲ್ ಹಮೀದ್ ಅನ್ಸಾರಿ ಅವರನ್ನು ಘನತೆವೆತ್ತ ರಾಜ್ಯಪಾಲ ವಜುಭಾಯಿ ರೂಡಾಭಾಯಿ ವಾಲಾ, ನಗರಾಭಿವೃದ್ಧಿ ಮತ್ತು ಹಜ್ ಸಚಿವ ಆರ್. ರೋಷನ್ ಬೇಗ್, ಮುಖ್ಯ ಕಾರ್ಯದರ್ಶಿ ಸುಭಾಷ್ ಕುಂಟಿಯಾ ಅವರುಗಳು ಉಪಸ್ಥಿತರಿದ್ದು ಬರಮಾಡಿಕೊಂಡರು.